## ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ

**ಸಿ.ಸಿ. ಸಂಖ್ಯೆಃ 240/2019**

ಪಿರ್ಯಾದುದಾರರುಃ ರಾಜ್ಯದ ಪರ ಅಜ್ಜಂಪುರ ಪೊಲೀಸರು

ವಿರುದ್ಧ

ಆರೋಪಿ : ನಾಗಮ್ಮ ಕೋಂ ತಿಪ್ಪೇಶಪ್ಪ,
ಸುಮಾರು 34 ವರ್ಷ,
ವಾಸಃ ಕಲ್ಲೇನಹಳ್ಳಿ ಗೇಟ್,
ಶಿವನಿ ಹೋಬಳಿ,
ತರೀಕೆರೆ ತಾಲ್ಲೂಕು.

# ದೋಷಾರೋಪಣೆ

ನಾನು ರೂಪ.ಎಂ.ಡಿ, ಸಿವಿಲ್ ನ್ಯಾಯಾಧೀಶರು ಮತ್ತು ಅಧಿಕ ಜೆ.ಎಂ.ಎಫ್.ಸಿ, ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರೆಸುತ್ತಿದ್ದೇನೆ.

ದಿನಾಂಕ **06.10.2018** ರಂದು ಮಧ್ಯಾಹ್ನ **2-00** ರ ಸಮಯದಲ್ಲಿ ಅಜ್ಜಂಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕಲ್ಲೇನಹಳ್ಳಿ ಗೇಟ್ನಲ್ಲಿ ಆರೋಪಿಯಾದ ನೀವು ನಿಮ್ಮ ಚಿಲ್ಲರೆ ಅಂಗಡಿಯ ಹಿಂಭಾಗದಲ್ಲಿ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ **90** ಎಂ.ಎಲ್.ನ **26** ರಾಜಾ ವಿಸ್ಕಿ ಪೌಚ್ಗಳನ್ನು **180** ಎಂ.ಎಲ್.ನ **5** ಓಲ್ಡ್ ಟವೇರಿನ್ ಪೌಚ್ಗಳನ್ನು ಹಾಗೂ **180** ಎಂ.ಎಲ್.ನ **4** ಬ್ಯಾಗ್ ಪೈಪರ್ ಪೌಚ್ಗಳನ್ನು ಮಾರಾಟಕ್ಕಾಗಿ ಇಟ್ಟುಕೊಂಡಿರುತ್ತೀರಿ. ಆದುದರಿಂದ ಆರೋಪಿಯಾದ ನೀವು ನನ್ನ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ **32** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಅಪರಾಧ ಮಾಡುವ ಉದ್ದೇಶದಿಂದ ಅಕ್ರಮವಾಗಿ ಮದ್ಯವನ್ನು ಹೊಂದಿದ್ದು, ಸದರಿ ಹೊಂದುವಿಕೆ ಅಕ್ರಮ ಎಂದು ಗೊತ್ತಿದ್ದರೂ ಸಹ ನಿಮ್ಮ ಬಳಿ ಹೊಂದಿರುತ್ತೀರಿ. ಆದುದರಿಂದ ಆರೋಪಿಯಾದ ನೀವು ನನ್ನ ಸಂಜ್ಞೆಯೊಳಗೆ ಕರ್ನಾಟಕ ಅಬಕಾರಿ ಕಾಯ್ದೆ **34** ರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿಗೆ ದಿನಾಂಕ **14.01.2022** ರಂದು ಓದಿ ಹೇಳಿ ಕೇಳಿ ಅವರಿಗೆ ಅರ್ಥವಾಗುವ ಭಾಷೆಯಲ್ಲಿ ತಿಳಿಸಿ ಯಥಾವತ್ತಾಗಿ ನಮೂದಿಸಲಾಗಿದೆ.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

(ರೂಪ.ಎಂ.ಡಿ)
ಸಿವಿಲ್ ನ್ಯಾಯಾಧೀಶರು ಮತ್ತು
ಅಧಿಕ ಜೆ.ಎಂ.ಎಫ್.ಸಿ, ತರೀಕೆರೆ.